

ವರ್ಷಕ್ಕೊಮ್ಮೆ ನಡೆಯೋ ಸಿದ್ದಪ್ಪನ ತೇರಿಗೆ ಕುರುಬರಗೇರಿ ಹುಡುಗರು ಕಟ್ಟಿದ ಕಲಿಯುಗದ ದ್ರೌಪದಿಯೂ ಭೀಮನೂ ಎಂಬ ನಾಟಕ ನೋಡಿ ನಸುಕಿಗೆ ಮನೆಗೆ ಬಂದ ನಾಗರತ್ನವ್ವ ಕಪ್ಪು ಚಾ ಕುಡಿದು, ಸೊಲ್ಲಾಪುರ ಹಚ್ಚಡ ಹೊದ್ದು ಮಲಗಿದಾಕಿ ಮುಖ ಸೈತ ತೆರೆಯಲೇ ಇಲ್ಲ. ನಾಟಕದಲ್ಲಿ ಹೀರೋ ಪಾತ್ರ ಮಾಡಿದ್ದ ಮಗ ನಾಗನಿಗೆ ಅವ್ವನ ಈ ವರ್ತನೆ ಯಾಕೋ ದಿಗಿಲು ಹುಟ್ಟಿಸಿತು. ಆಕೆಯ ಹಿರೀ ಸೊಸೆ ಸುಶೀಲ, ನಾಯಿ ತಡವಿ ಲಕ್ಷಣ ಕಳಕಳ್ಳೋದು ಬ್ಯಾಡ ಅಂತ ಅತ್ತೆಯ ಗೋಜಿಗೇ ಹೋಗ್ಲಿಲ್ಲ.

'ಅವ್ವಗೇನಾಗೇತಿ, ಉಂಡ್ಲ ತಿಂದ್ಲ ಅಂತ ಕೇಳಿದಿಲ್ಲ?' ಅಂತ ನಾಗ ತನ್ನತ್ತಿಗೆಗೆ ಅಡುಗೆ ಮನೇಲಿ ಆಡಿದ ಮಾತು ನಾಗರತ್ನವ್ವಳ ಕಿವಿಗೆ ಬಿದ್ದದ್ದೇ ತಡ, ಹೊದ್ದ ಹಚ್ಚಡ ತೆಗೆದು ಮುಲುಕುತ್ತಾ ಮೇಲೇಳುತ್ತಲೇ 'ಬೆಕ್ಕು ಬಡವಾದ್ರೆ ಇಲಿ ಹುಬ್ಬು ಹಾರಸ್ತಂತೆ ನಾಗ. ನಾನಿಂಗ ಸೆಟಗಂಡೊಗದ ಬೇಕಾಗ್ಯತಿ, ಜನ್ರಿಗೆ. ಎಲ್ಲಾ ಸಲೋ ತನಗಿರರು ಯಾಕ ತೆಲಿ ಕೆಡಿಸಿಕೆಂತರಲೋ ಇನ್ನೊಬ್ರ ಬಗ್ಗೆ?' ಅಂತ ಹಾಸಿಗೀಲಿ ಮುಲುಕುತ್ತಲೇ ಸೊಸೆಗೆ ಬೈಗಳ ಬಾಣ ಬಿಟ್ಟಳು. ಒಂದಾಡಿದ್ರೆ ನೆವ ಇಟ್ಟು ನೂರಾಡೋ ತನ್ನತ್ತೆ ಸ್ವಭಾವ ಬಲ್ಲ ಸೊಸೆ  ಸುಮ್ಮನಿದ್ದರದ ಅದೇನೋ ಊರೆಲ್ಲಾ ಹರ್ಕಂಡಿದ್ರಂತೆ ಅಂತ ಸುಮ್ಮನೇ ಒಲೆ ಮುಂದೆ ಕುಳಿತು, ಕುದಿಯುತ್ತಿದ್ದ ಅನ್ನದ ಪಾತ್ರೇಲಿ ಸೌಟಾಡಿಸುತ್ತಿರಲು, ಒಂದು ಮಾನಸಿಕ ಸೌಟು ಅವಳ ಅಂತರಾಳದಲ್ಲೂ ಗೂರಾಡುತ್ತಿತ್ತು. ಮೂರ್ದಿನದ ಜಾತ್ರೀಲಿ ಒಲೆ ಜಳಕ್ಕೆ ರೋಸದೇ, ಹುಣ್ಣಾ ರುಬ್ಬಿ, ಹೋಳಿಗೆ, ಅನ್ನ, ಸಾರು, ಪಚಡಿ, ಹಿಂಗ ಸರ್ವನ್ನೊಂದೂ ಮಾಡಿ, ಬಂದ ಬೀಗ್ರುಬಿಜ್ರಿಗೆಲ್ಲಾ ನೀಡಿದ್ರೂನೂ ಸೊಸೆಗೆ ಒಂದಿಷ್ಟೂ ಆಸರಾಗದ ತನ್ನತ್ತೆ ಸುಮ್ಮನೇ ಸೋಗು ಮಾಡ್ತಾಳಂಬೋದೇ ಸುಶೀಲೆಯ ಭಾವನೆ. 'ನಿಮ್ಮತ್ತಿಗೇನಾಗ್ಯತಿ?' ಅಂತ ಮಗ್ಗಲ ಮನಿ ಶಾಂತವ್ವ ಕೇಳಿದ್ಕೆ 'ಏನಾಗ್ಯತ ಯಾವಳ ಬಲ್ಲು? ಹಿಡದಳಲ್ಲ ಬಡದಳಲ್ಲ ತಂಬಿಟ್ಟು ತಿಂದಳಿಗ್ಯಾಕ ಕತ್ತು ನೋವು?' ಅಂತಂದು ತನ್ನ ಬ್ಯಾಸ್ರ ಹೊರ ಹಾಕಿದ್ಲು.

ಅದೇನು ಕಾರಣವೋ, ನಾಗರತ್ನವ್ವ, ತಮಾ, ಸಳಿ ಸಳಿ! ಬಾಯೆಲ್ಲಾ ಇಸ ಇಸ! ನನಿಗೆ ಸಮಾಧಾನಿಲ್ಲ' ಅಂತ ಮಗನಿಗೆ ದುಂಬಾಲು ಬಿದ್ದು ದಾವಣಗೆರೆ ಚಿಗಟೇರಿ ಆಸ್ಪತ್ರಿಗೆ ಕರ್ಕಂಡು ಬಂದ್ಲು. 'ತಮ್ಮಾ, ಎಳ್ಡ ದಿನ ಕೂಳಿಲ್ಲದ ಹ್ವಟ್ಟಿ ಬೆನ್ನಿಗೆ ಹತ್ಯತಿ' ಅಂತ ಹೋಟೆಲ್ಲಿಗೆ ಎಳೆದುಕೊಂಡು ಹೋಗಿ ಇಡ್ಲಿ ವಡೆ ತಿಂದು, ಆಸ್ಪತ್ರೆಯಲ್ಲಿ ತೋರಿಸಿಕೊಂಡು, ಪಾರ್ಕಿಗೆ ಹೋಗಿ, ಅವನನ್ನೆದುರಿಗೇ ಕುಳ್ಳಿರಿಸಿಕೊಂಡು, ಅಜ್ಜಯ್ಯ ಬಂದವರಂತೆ ಆವೇಶ ತಾಳಿ, 'ನಾಗಾ ನನ ಮನಿ ತನ ಹಾಳಾಗೋತಲ್ಲೋ...! ನೀನಾಡಿದ ನಾಟಗೆಂಗೋ ನನ ಮನಿ ಕತೀನೂ ಹಂಗಾ ಆಗಾತ್ಯಲ್ಲೋ ...! ನಡಿ ಊರಿಗೋಗಣ! ಮದ್ಲಾ ಕತ್ತೆ ಸೂಳಿ ಹೊರಗಾಕನ, ಲೋ, ಅವಳನ್ನ ಒಳಗ ಇಟಗಂಡ್ರ ನೀನು ಕೆಟ್ಟೆ! ಹಾದ್ರಗಿತ್ತಿ, ಕತ್ತೆ ಸೂಳೆ! ಬಂಗಾರದಂತ ಬಾಳಿಗೆ ಬೆಂಕಿ ಇಟ್ಲಲ್ಲೋ...!' ಅಂತ ಮಗನ ಕೊರಳ್ಹಿಡಿದು ಆಡಿಂಗನ ಮಾಡಿ ಅತ್ತರೂ ಎಷ್ಟೂ ಕರಗದ ನಾಗ ಕೃತಕ ದಿಗ್ಭ್ರಾಂತಿ ವ್ಯಕ್ತಪಡಿಸುತ್ತಾ, 'ಯವಾ! ಅದು ನಾಟಗ. ಇದು  ಬಾಳ್ವಿ! ಅದ್ಕೂ ಇದ್ಕೂ ಏನ್ಸಂಬಂಧ? ನಮ್ಮಣ್ಣೀ ಬರ್ದಾಗೇನಿತ್ತೋ ಹಂಗಾತು. ಟೀಬೀ ಬಂದು ಅಪ್ಪ ಸತ್ತ. ಅದೇನಾತೋ, ಇಬ್ರು ಅಣ್ಣಗುಳು ಸತ್ರು. ನನ್ನ ಒಂಟಿ ಮಾಡಿದ್ರು. ಇದನ್ನೆಲ್ಲಾ ನೀಸಿ ಸಾಯಬಕಂಬದು ನನ್ನ ನಿನ್ನ ಹಣ್ಯಾಗ ಬರ್ದಂಗೈತಿ. ದೈವದಾಟ..' ಅಂತ ನಾಟಕೀಯ ಭಾವುಕತೆ ತೋರಿದ.

ಮತ್ತಷ್ಟೂ ಆವೇಶಗೊಂಡ ನಾಗರತ್ನವ್ವ, ಮುಚ್ಚಲೋ ಬಾಯಿ ಅಂತ ನಾಟಕದ ಸುಭದ್ರಮ್ಮನಂತೆ ಛಟಾರಿಸಿ, ತನ್ನೆದೆ ಬಡಿದುಕೊಳ್ಳುತ್ತಾ, ಅದೇನಾಗ್ಯತಂತ ನನ್ನಾತ್ಮಕ್ಕ ಹ್ವಳೀತತಿ. ಅದನ್ನೀಗ ಮಾತಾಡ್ಯೇನು ಪ್ರಯೋಜನ? ಆ ಹಾದ್ರಗಿತ್ತಿನ ಮನ್ಯಾಗಿಟಗಾ ಕೂಡದು, ಬಾಯಿ ಮುಚ್ಚಿಗೆಂದು ಬಸ್ಸತ್ತು ಅಂತ ಖಡಕ್ಕಾಗಿ ನುಡಿದು, ಮಗನನ್ನು ಊರಿಗೆ ಎಳೆದುಕೊಂಡು ಬಂದ ನಾಗವ್ವ, ಅದೇನನುಮಾನವೋ, ಅವತ್ತು ರಾತ್ರಿಯಿಂದಲೇ, ತನ್ನ ಗುಳಿಗೆ ಔಷಧಗಳನ್ನೆಲ್ಲಾ ಟ್ರಂಕಲ್ಲಿಟ್ಟು ಬೀಗ ಹಾಕಿ, ಕೋಣೆ ಬಾಗಿಲು ಮುಚ್ಚಿಕೊಂಡು ಮಲಗಿದಳು. ಬೆಳಗಾಗುತ್ತಲೇ ಸೊಸೆಯೊಂದಿಗೆ ಜಗಳ ತೆಗೆದಳು. 'ನೀನೇ ನನ್ನ ಮನಿತನ ಮುರ್ದಿರದು, ಹಾದ್ರಗಿತ್ತಿ ಎಂಬೋ ಆಪಾದನೆಯಂತೂ ಎಲ್ಲರಲ್ಲೂ ಅಚ್ಚರಿ ಮೂಡಿಸಿತು. ನಿನ ಗಂಡನ ಪಾಲಿನ ಹ್ವಲ, ಎಳ್ಡಂಕಣ ಮನೀನ ನಾಕು ಹೆಣ್ಣು ಮಮ್ಮಕ್ಕಳ ಹೆಸ್ರಿಲಿ ಇಲ್ ಬರೀತನಿ ಗರ್ತೀ ಮಗಳಾಗಿದ್ರ ನಾಳೇನತ್ತೇ ನಿನ್ನೊಲಿ ಊಡಿಕೆಂದು ಬುಡು' ಅಂತ ಸೊಸೆಗೆ ಗೇಟ್ಪಾಸ್ ನೀಡಿ ಬಿಟ್ಟಳು. ಇಷ್ಟೆಲ್ಲಾ ರಾದ್ಧಾಂತವಾದ ಮೇಲೆ ಅತ್ತೆಯೊಂದಿಗೆ ತಾನಿರೋದ್ಯಾಕೆ? ಅಂತ ಯೋಚಿಸಿದ ಸುಶೀಲೆ, ನಾಗಪ್ಪ ಬೇಲ್ದಾರ್ ಕಾಸೀಮಪ್ಪನ್ನ ಕರ್ಸಿ ಅಡ್ಡ ಗ್ವಾಡಿ ಇಡ್ಸು' ಅಂತ ಮೈದುನಗೆ ಹೇಳಿ, ಅವತ್ತೇ ಕಟ್ಟೆಯ ಮೇಲೆ ಕಲ್ಲು ಊಡಿ ಬೇರೆ ಕವಳ ಬೇಯಿಸಿಕೊಂಡಳು. ಸುಶೀಲ ಪ್ರತ್ಯೇಕ ಸಂಸಾರ ಹೂಡಿದ ಮೇಲೆ, ಆಕಿನ್ನ ಮಾತಾಡಸಕಾಗದು ಆಕಿ ಒಸ್ಲು ತುಳಿಯಕಾಗದು ಅಂತ ಮಗ ನಾಗನಿಗೆ ಕಟ್ಟಾಜ್ಞೆ ವಿಧಿಸಿದಳು. ಇದಾಗಿ ಕೆಲವೇ ತಿಂಗಳಲ್ಲಿ ಮಲಗಿದಲ್ಲೇ ನಿಗೂಢವಾಗಿ ನಾಗರತ್ನವ್ವ ಸತ್ತಾಗ, ಸಾವೆಂಬೋದು ಪಕ್ಕೀರಪ್ಪನ ಮನಿತನದ ಮ್ಯಾಗ ಮುಂಗಾರೀ ಮಳಿಯಂಗ ಜಡಿಯಾಕತ್ಯಾತಿ ಅಂದ್ರು ಜನ!

ಪಕ್ಕದ ಮನೆ ಶಾಂತವ್ವನ ಬಳಿ, 'ತೇರಿನ್ಯಗ ನಾಟಗ ನೋಡಿದ್ರಿಲ್ಲೇ ತಾಯಿ. ನಮ್ಮನಿ ಕತಿನೂ ಅದ ನೋಡು. ಸೂಕ್ಸಿಮಿಲಿ ನಾನೇಳದಿಟ ಅಂತ ಸಾಯೋದಕ್ಕೂ ಒಂದೆರಡು ದಿನ ಮುಂಚೆ ಅಂದದ್ದೇ ಸಾಕಾಗಿತ್ತು. ಕಳೇ ಕಾಸಿಗೆ ಕೊಯ್ಲು ಕೆಲಸ ಮಾಡೋರಿಂದ ಹಿಡಿದು ಮನೆ ಕಟ್ಟೋ ತರಗಾರರು, ಬೀಡಿ ಕಟ್ಟೋ ಹೆಂಗಸರವರೆಗೆ ಎಲ್ಲರ ಮನೋ ಮಂದಿರವನ್ನು ಕಾರ್ಮೋಡದಂತೆ ಆವರಿಸಿ ಬಿಟ್ಟಿತು. ಅವರು ಬಲ್ಲ ಅರೆ ಸತ್ಯ ಊಹೆಗಳಿಗೆ ತೇಪೆ ಹಾಕಿ ತಿದ್ದಿ ತೀಡಿ ಸತ್ಯಕ್ಕೆ ಪೂರ್ಣ ರೂಪವಿಡಲು  ತಾವು ನೋಡಿದ್ದ ಕಲಿಯುಗದ ದ್ರೌಪದಿಯೂ ಭೀಮನೂ ಎಂಬ ನಾಟಕವೂ ನೆರವಾಗಿತ್ತು.

* **

ಸಾಂಗತ್ಯಪುರಾಣ, ತೊಗಲು ಗೊಂಬೆ ಆಟಾದಿ ಈಗಿನ ನಾಟಕ ಸಿನಿಮಾ ಧಾರಾವಾಹಿಗಳವರೆಗೆ ಎಲ್ಲಾ ನೋಡಿ ಕಳೆ ತೆಗೀವಾಗ, ಹುಣುಸೆ ಹಣ್ಣು ಬಡೀವಾಗ , ನವಣೆ ಬಡ್ಡೆ ಬಡೀವಾಗ, ಉಳ್ಳಾಗಡ್ಡಿ ಹೆಚ್ಚುವಾಗ ಆ ಕತೆಗಳನ್ನು ಯಥಾವತ್ ಮರುಸೃಷ್ಟಿಸಿ ಮನ ರಂಜಿಸುವ ಕಲೆಗಾತಿ ಎಪ್ಪತ್ತರ ವೃದ್ಧೆ ದ್ಯಾಮವ್ವ, ಒಂದು ದಿನ ತನ್ನ ಹೊಲದಲ್ಲಿ ಕಳೆ ತೆಗೆಯೋವಾಗ, ತೇರಿನ ದಿನ ನೋಡಿದ್ದ ಆ ನಾಟಕದ ಕತೆಯೊಂದಿಗೆ ನಾಗರತ್ನವ್ವಳ ಕುಟುಂಬದ ದುರಂತ ಕಥನವನ್ನು ತುಲನೆ ಮಾಡಿ, ತನ್ನ ಗೆಣೆಕಾತಿಯರಾದ ತಾರಳ್ಳಿ ಸಿದ್ದವ್ವ, ಸಂಕವ್ವರಿಗೆ ಹೇಳುತ್ತಿರುವಳು. ಅಂತೂ ಆ ಕಥಾನಕದೊಳಗೆ ನಾಗರತ್ನವ್ವಳ ಸಂಸಾರದ ಈ ದುರಂತ ಕಥನದ ನಿಗೂಢ ಸತ್ಯ ಮಿಣುಕುತ್ತಿರುವುದು.

'ಸಿದ್ದವ್ವಾ, ನೀನು ನಾಟಗ ನೋಡ್ಬೇಕಿತ್ತು ಬುಡಲೇ ಉಡ್ಗಿ. ದಿನಾ ಅದಿದ್ದದ್ದ! ನನ ತಮ್ಮಗೊಂದಿನ ರಜಾ ಹೇಳಿದ್ರೇನು ಗಂಟೊಕ್ಕುತ್ತು? ಅಂತ ಗೇಲಿ ಮಾಡಿದ ದ್ಯಾಮವ್ವ, ಪಿಚಕ್ಕನೇ ಎಲೆಡಿಕೆ ರಸ ಉಗುಳಿ, ನಾಟಗದ ಕತೆ ಆರಂಭಿಸಿದ್ಲು. ಈ ನಾಗಪ್ಪನ ಭೀಮ, ಆಕಿ ಬಂಗಾರಕ್ಕನಳ್ಳಿ ಕಮಲ, ದ್ರೋಪತಿ ಇವರ್ಯಾರಂದ್ರ..., ಸಾವ್ಕಾರ ಸೇಕರಪ್ಪಗ ಸ್ಯಂಕರ, ಸತೀಶ, ಸಿರಿದರ, ಸಿರಪಾದಪ್ಪ, ಜಗದೀಸಪ್ಪ ಅಂತ ಪಾಂಡವರಂಗ ಐದು ಮಂದಿ ಮಕ್ಕಳು. ಇರೇ ಮಗ ಸ್ಯಂಕ್ರಪ್ಪನ ದರುಮ್ರಾಯ.! ಸಣ್ಣತ ಜಗದೀಸ್ಯಪ್ಪನ ಕಲಿಯುಗದ ಭೀಮ. ಸ್ಯಂಕ್ರಪ್ಪ ಸಲುಪ ರೋಗಿಷ್ಟದಮ್ಮು ಕೆಮ್ಮು... ಹಂಗಾ ಬಕ್ಕಬಾರ್ಲೇ ಇಕ್ಕಿಸಿಗೆ ಮದ್ಕಿಂತ ಮದಿವ್ಯಾಗಿ ಸಾಯಿ ಅಂತ ಅವ್ರಪ್ಪ ಮಗನಿಗೆ ಒಳ್ಳೇ ಮನಿತನದಾಗ ಈ ದ್ರೋಪತಿ ಅಂದ್ರ ಸ್ಯಾಂಬವಿನ ತಂದು ಲಗ್ನ ಮಾಡ್ತನ. ಅದೇನ ಅಂತಾರಲ್ಲೇ ಸೋಬನಕ್ಕ......? ಅಂದ ದ್ಯಾಮವ್ವಗೆ ಪಷ್ಟ್ ನೈಟ್ ಅಂತ ಸಂಕವ್ವ ನೆನಪು ಮಾಡಿದ್ಲು. ಆ ಅದ....ಪಷ್ಟ್ ನೈಟ್ ದಿಸನ ಸ್ಯಾಂಬವ್ವಕ್ಕಗ ಸ್ಯಂಕ್ರಪ್ಪ ಹಿಡಸಲ್ಲ. ಗಂಡಗ ತಂದ ಹಾಲಿನ ಕಪ್ಪ ಬಡಲ್ ಅಂತ ಹ್ವಗದು, ನಿನ್ನಂತನ ಕಟಿಗೆಮಕ ನಾನೇನ ಕರ್ಮ ಮಾಡಿದ್ನ್ಯಾ! ಅಂತ ಲಬ್ ಲಬ್ ಅತ್ತಗಂತ ಕುಂತು ಬಿಡ್ತಳ. ಅವನು ಸ್ಯಂಕ್ರಪ್ಪ, ನಮ ಮರ್ವಾದಿ ಉಳ್ಸು! ಒಂದು ಕೂಸು ಕೊಟ್ಟು ನನ್ನ ವಂಶ ಬೆಳ್ಸು.....ಹಂಗ ಮಾಡಬ್ಯಾಡ! ಅಂತ ಸಮಾಧಾನ ಮಾಡ್ತನ! ಆಮ್ಯಾಗೇನಕತಿ ಅಂದ್ರ, ಮೈದ ಸತೀಶಪ್ಪನ ಮ್ಯಾಗ ಈ ಸ್ಯಾಂಬವ್ವಕ್ಕನ ಕಣ್ಣು ಬಿತ್ತು: ಅವನಿಗೆ ತಿಂಡಿ ಊಟ ಕೊಡದು, ಬಚ್ಲಿಗೋಗಿ ಮೈ ತಿಕ್ಕದು, ಕಾರೂ ಬೈಕಿನ್ಯಗ ಜತಿಗೆ ಮಾರ್ಕೆಟು ಸಿಲುಮಾ ಅಂತ ತಿರ್ಗಾದು ಮಾಡಿ, ಅವನ್ನ ಒಬ್ರಿಗೂ ಐವ್ ಇಲ್ದಂಗ ತಗಲು ಹಕ್ಕ್ಯಂದು ಬಿಡ್ತಳ. ಇದು, ಗಂಡ ಸ್ಯಂಕ್ರಪ್ಪತೇಟ್